Akashvani : Bangalore
National Bulletin In Kannada
02.07.2024 / 19.35 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

- ಎಲ್ಲ ವರ್ಗಗಳ ಸಂತುಷ್ಟೀಕರಣಕ್ಕೆ ಸರ್ಕಾರ ಒತ್ತು; ಲೋಕಸಭೆ ಅಧಿವೇಶನದಲ್ಲಿ ಪ್ರಧಾನಿ ನರೇಂದ್ರ ಮೋದಿ
- ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ಕಾಲ್ತುಳಿತಕ್ಕೆ ಕನಿಷ್ಠ ೮೦ ಮಂದಿ ಸಾವು; ಪ್ರಧಾನಿ ಸೇರಿದಂತೆ ಗಣ್ಯರ ಸಂತಾಪ
- ವಾಡಿಕೆಗಿಂತ ಆರು ದಿನಗಳ ಮೊದಲೇ ಇಡೀ ದೇಶ ವ್ಯಾಪಿಸಿದ ನೈಋತ್ಯ ಮುಂಗಾರು
- ಯೂರೋ ಕಪ್ ಫುಟ್ಬಾಲ್; ಇಂದು ರೊಮೆನಿಯಾ - ನೆದರ್‌ಲ್ಯಾಂಡ್ಸ್ ಮುಖಾಮುಖಿ

<><*<><>*><>

ಉಭಯ ಸದನಗಳಲ್ಲಿಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭಾಷಣದ ಮೇಲಿನ ವಂದನಾ ನಿರ್ಣಯ ಮೇಲೆ ಚರ್ಚೆ ಮುಂದುವರೆದಿದೆ. ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಭಾರತ ಐದನೇ ಅತಿದೊಡ್ಡ ಆರ್ಥಿಕತೆಯಾಗಿದ್ದರೂ ಭಾರತದ ತಲಾ ಆದಾಯ ನಿರೀಕ್ಷಿತ ಮಟ್ಟದಲ್ಲಿಲ್ಲ. ಕೇಂದ್ರ ಸರ್ಕಾರ ಯುವ ಜನರಿಗೆ ಉದ್ಯೋಗಾವಕಾಶ ನೀಡುತ್ತಿಲ್ಲ ಎಂದರು. ಬಿಜೆಪಿ ಸಂಸದ ಸಂತೋಷ್ ಪಾಂಡೆ ಮಾತನಾಡಿ ಮೂಲಸೌಕರ್ಯ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ ಎಂದರು. ರಾಜ್ಯಸಭೆಯಲ್ಲಿಂದು ವಂದನಾ ನಿರ್ಣಯದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅಸೋಮ್ ಗಣಪರಿಷತ್‌ನ ಬಿರೇಂದ್ರ ಪ್ರಸಾದ್ ಬೈಷ್ಯ, ಅಸ್ಸಾಂನ ಕೆಲವು ಸಮುದಾಯಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಕುರಿತು ಪ್ರಸ್ತಾಪಿಸಿದರು. ಇದೇ ವೇಳೆ ಅವರು, ಅಸ್ಸಾಂನಲ್ಲಿ ಹೆಚ್ಚುತ್ತಿರುವ ಅಕ್ರಮ ವಲಸಿಗರ ಕುರಿತು ಕಳವಳ ವ್ಯಕ್ತಪಡಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಪಾಲ್ಗೊಂಡರು. ಜಗತ್ತಿನ ಬೃಹತ್ ಪ್ರಜಾಸತಾತ್ಮಕ ರಾಷ್ಟ್ರವಾದ ಭಾರತದಲ್ಲಿ ಸಾರ್ವತ್ರಿಕ ಚುನಾವಣೆಯನ್ನು ಅತ್ಯಂತ ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಜನತೆ ಪ್ರೌಢತೆ ಹಾಗೂ ಪರಿಪೂರ್ಣತೆ ಮೆರೆದಿದ್ದು, ಅತ್ಯಂತ ವಿವೇಕಯುತವಾಗಿ ಮತ ಚಲಾಯಿಸಿದ್ದಾರೆ. ಹೀಗಾಗಿ ಎನ್‌ಡಿಎ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದಿದೆ ಎಂದು ಪ್ರಧಾನಿ

ಹೇಳಿದರು. ಕಳೆದ ಹತ್ತು ವರ್ಷಗಳಲ್ಲಿ ವಿವಿಧ ವಲಯಗಳಲ್ಲಿ ದೇಶದ ಅಭಿವೃದ್ಧಿಯಾಗಿದ್ದು, ಅತ್ಯಂತ ಕಡಿಮೆ ಸಮಯದಲ್ಲಿ ೨೫ ಕೋಟಿಗೂ ಹೆಚ್ಚು ಜನರು ಬಡತನ ರೇಖೆಯಿಂದ ಹೊರಬಂದಿದ್ದಾರೆ . ಪ್ರತಿಪಕ್ಷಗಳ ತುಷ್ಟೀಕರಣ ನೀತಿಯ ವಿರುದ್ಧ ಸರ್ಕಾರ ಎಲ್ಲ ವರ್ಗಗಳ ಸಂತುಷ್ಟೀಕರಣಕ್ಕೆ ಒತ್ತು ನೀಡಿದೆ ಎಂದರು. ಪ್ರಧಾನಿ ಉತ್ತರದ ಮಧ್ಯೆ ಪ್ರತಿಪಕ್ಷದ ನಾಯಕ ಹಾಗೂ ಇತರೆ ಸದಸ್ಯರು ಘೋಷಣೆ ಕೂಗತೊಡಗಿದರು. ಈ ವೇಳೆ ಸ್ಪೀಕರ್ ಓಂ ಬಿರ್ಲಾ, ಸದನ ನಾಯಕರು ಉತ್ತರ ನೀಡುವ ವೇಳೆ ಈ ರೀತಿ ಅನುಚಿತವಾಗಿ ವರ್ತಿಸುವುದು ಶೋಭೆಯಲ್ಲ. ಪ್ರತಿಪಕ್ಷದ ನಾಯಕರು ತಮ್ಮ ಸ್ಥಾನದ ಘನತೆಗೆ ತಕ್ಕಂತೆ ವರ್ತಿಸಬೇಕು ಎಂದು ಎಚ್ಚರಿಸಿದರು.

<><*<><>*><>

ನೂತನ ಸರ್ಕಾರ ರಚನೆಯ ಬಳಿಕ ನವದೆಹಲಿಯಲ್ಲಿಂದು ನಡೆದ ಮೊದಲ ಎನ್‌ಡಿಎ ಪಕ್ಷದ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಸಂಸತ್ತಿನಲ್ಲಿ ನಿಯಮಗಳಿಗೆ ಬದ್ಧರಾಗಿ ಸಂಸದೀಯ ಪ್ರಜಾಪ್ರಭುತ್ವದ ತತ್ವಗಳನ್ನು ಪಲಿಸುವುದರೊಂದಿಗೆ ಉತ್ತಮ ಸಂಸದರಾಗಬೇಕು ಎಂದು ಎನ್‌ಡಿಎ ಸದಸ್ಯರಿಗೆ ಸೂಚಿಸಿದ್ದಾರೆ. ಸಂಸತ್ತಿನ ನಿಯಮಗಳಿಗೆ ಬದ್ಧರಾಗಿ ಸಂಸದೀಯ ಪ್ರಜಾಪ್ರಭುತ್ವದ ತತ್ವಗಳನ್ನು ಸಂಸದರು ಎತ್ತಿ ಹಿಡಿಯಬೇಕು ಎಂದು ಪ್ರಧಾನಿ ನರೇಂದ್ರ ಮೋದಿ, ಸಂಸತ್ತಿನ ಎಲ್ಲಾ ಎನ್‌ಡಿಎ ಸದಸ್ಯರಿಗೆ ಸೂಚಿಸಿದ್ದಾರೆ. ನೂತನ ಸರ್ಕಾರದ ರಚನೆಯ ಬಳಿಕ ನವದೆಹಲಿಯಲ್ಲಿ ನಡೆದ ಮೊದಲ ಎನ್‌ಡಿಎ ಸಂಸದೀಯ ಪಕ್ಷದ ಸಭೆಯಲ್ಲಿ ಇಂದು ಉದ್ದೇಶಿಸಿ ಮಾತನಾಡಿದ ಅವರು, ಸಂಸತ್ತಿನಲ್ಲಿ ಸದಸ್ಯರು ಉತ್ತಮ ನಡೆತೆ ಪ್ರದರ್ಶಿಸಿ ಉತ್ತಮ ಸಂಸದರಾಗಬೇಕು ಎಂದರು. ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜೂ, ಪ್ರಧಾನಿ ನರೇಂದ್ರ ಮೋದಿ ಎಲ್ಲಾ ಸಂಸದರಿಗೆ ಉತ್ತಮ ನಡವಳಿಕೆ ಕುರಿತು ಮಾರ್ಗದರ್ಶನ ನೀಡಿದ್ದಾರೆ. ಪ್ರತಿಯೊಬ್ಬ ಸದಸ್ಯರು ದೇಶಸೇವೆಗಾಗಿ ಚುನಾಯಿತರಾಗಿದ್ದಾರೆ. ಹಾಗಾಗಿ, ಅವರು ಯಾವುದೇ ಪಕ್ಷಕ್ಕೆ ಸೇರಿದವರಾಗಿದ್ದರೂ, ರಾಷ್ಟ್ರಸೇವೆ ಅವರ ಮೊದಲ ಜವಾಬ್ದಾರಿಯಾಗಿರುತ್ತದೆ ಎಂದು ತಿಳಿಸಿದ್ದಾರೆ. ಪ್ರಧಾನಿ, ಸಾಮಾಜಿಕ ವಲಯ, ಪರಿಸರ, ನೀರು ಸೇರಿದಂತೆ ಇತರ ಅಗತ್ಯ ಸಮಸ್ಯೆಗಳ ಕುರಿತು ಸಂಸದರು ಜಾಗೃತರಾಗಿರಬೇಕು ಎಂದು ಸಂಸದರನ್ನು ಪ್ರೋತ್ಸಾಹಿಸಿದರೆಂದು ಕಿರಣ್ ರಿಜಿಜು ತಿಳಿಸಿದರು. ಇದೇ ವೇಳೆ, ಎಲ್ಲಾ ಸಂಸದರು ಪಕ್ಷ ಭೇದ ಮರೆತು ಮೊದಲನೆ ಪ್ರಧಾನಿ ಜವಾಹರ್‌ಲಾಲ್ ನೆಹರು, ಅವರಿಂದ ಹಿಡಿದು ಈಗಿನ ಪ್ರಧಾನಿ ನರೇಂದ್ರ ಮೋದಿಯವರೆಗೆ ಅವರ ರಾಜಕೀಯ ಹಾದಿಯನ್ನು ಪ್ರತಿಬಿಂಬಿಸುವ ಪ್ರಧಾನ ಮಂತ್ರಿ ಸಂಗ್ರಹಾಲಾಯಕ್ಕೆ ಕುಟುಂಬ ಸಮೇತರಾಗಿ ಭೇಟಿ ನೀಡಿ ಎಂದು ಪ್ರಧಾನಿ ಕರೆ ನೀಡಿದ್ದಾರೆ ಎಂದು ಕಿರಣ್ ರಿಜಿಜೂ ಮಾಹಿತಿ ನೀಡಿದ್ದಾರೆ.

<><*<><>*><>

ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ಭೋಲೆ ಬಾಬಾ ಸತ್ಸಂಗ ಕಾರ್ಯಕ್ರಮದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಕನಿಷ್ಠ ಮಂದಿ ಮೃತಪಟ್ಟಿದ್ದು, ಅನೇಕರು ಗಾಯಗೊಂಡಿದ್ದಾರೆ. ಹತ್ರಾಸ್ ಜಿಲ್ಲೆಯ ಪುಲರೈ ಗ್ರಾಮದಲ್ಲಿ ಏರ್ಪಡಿಸಿದ್ದ ಸತ್ಸಂಗದಲ್ಲಿ ಅಪಾರ ಪ್ರಮಾಣದ ಭಕ್ತರು ಜಮಾಯಿಸಿದ್ದರು. ಈ ವೇಳೆ ಕಾಲ್ತುಳಿತದಲ್ಲಿ ಅನೇಕ ಮಹಳೆಯರು ಸೇರಿದಂತೆ ಕನಿಷ್ಠ ೮೦ ಮಂದಿ ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ಸುಮಾರು ಅನೇಕರು ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತ ದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೃತ ಕುಟುಂಬಗಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಸಂತಾಪ ಸೂಚಿಸಿದ್ದಾರೆ. ಗಾಯಳುಗಳು ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ. ಇದೇ ವೇಳೆ ಮೃತ ಕುಟುಂಬಗಳಿಗೆ ತಲಾ ೨ ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ ತಲಾ ೫೦ ಸಾವಿರ ರೂಪಾಯಿ ಪರಿಹಾರವನ್ನು ಪ್ರಧಾನಮಂತ್ರಿ ಘೋಷಿಸಿದ್ದಾರೆ.

<><*<><>*><>

ವಾಡಿಕೆಗಿಂತ ಆರು ದಿನಗಳ ಮೊದಲೇ ನೈಋತ್ಯ ಮುಂಗಾರು, ಇಡೀ ದೇಶವನ್ನು ವ್ಯಾಪಿಸಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಗುಜರಾತ್, ಬಿಹಾರ, ಅಸ್ಸಾಂ, ಮೇಘಾಲಯದ ಹಲವೆಡೆ ಹಾಗೂ ಮಧ್ಯಪ್ರದೇಶ, ಮಹಾರಾಷ್ಟ್ರ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಮ್, ತ್ರಿಪುರ ಮತ್ತು ಉತ್ತರ ಪ್ರದೇಶದ ಕೆಲವೆಡೆ ಇಂದು ಧಾರಾಕಾರ ಮಳೆಯಾಗಿದೆ. ಇದೇ ವೇಳೆ ಮುಂದಿನ ಎರಡು ಮೂರು ದಿನಗಳಲ್ಲಿ ಉತ್ತರಾಖಂಡ್, ಅಸ್ಸಾಂ ಮತ್ತು ಮೇಘಾಲಯದಲ್ಲಿ ಭಾರೀ ಮಳೆ ಆಗುವ ಸಾಧ್ಯತೆ ಹಿನ್ನೆಲೆಯಲ್ಲಿ ಭಾರತೀಯ ಹವಾಮಾನ ಇಲಾಖೆ ಈ ಪ್ರದೇಶಗಳಿಗೆ ರೆಡ್ ಅಲರ್ಟ್ ಘೋಷಿಸಿದೆ. ಹಿಮಾಚಲ ಪ್ರದೇಶ, ಪಂಜಾಬ್, ಹರಿಯಾಣ, ಛತ್ತೀಸ್‌ಗಡ, ಉತ್ತರ ಪ್ರದೇಶ ರಾಜಸ್ಥಾನ್ ಮತ್ತು ಬಿಹಾರನಲ್ಲಿ ಮುಂದಿನ ೩ ರಿಂದ ೪ ದಿನಗಳ ಕಾಲ ಧಾರಕಾರ ಮಳೆ ಪರಿಸ್ಥಿತಿ ಮುಂದುವರೆಯಲಿದೆ.

<><*<><>*><>

ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಗಂಭೀರವಾಗಿದೆ. ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ ೩೬ ಕ್ಕೆ ಏರಿಕೆಯಾಗಿದೆ. ರಾಜ್ಯದ ೧೯ ಜಿಲ್ಲೆಗಳ ಆರು ಲಕ್ಷಕ್ಕೂ ಹೆಚ್ಚು ಜನರು ಪ್ರವಾಹದಿಂದ ತತ್ತಿರಿಸಿದ್ದಾರೆ. ಕಳೆದ ೨೪ ಗಂಟೆಗಳಲ್ಲಿ ತಿನ್ಸುಕಿಯ ಮತ್ತು ದೇಮಾಜಿಯಲ್ಲಿ ಇಬ್ಬರು

ಸಾವನಪ್ಪಿದ್ದು, ಗೋಲಾಘಾಟ್‌ನಲ್ಲಿ ಮತ್ತೊಬ್ಬರು ನಾಪತ್ತೆಯಾಗಿದ್ದಾರೆ. ರಾಜ್ಯಾದ್ಯಂತ ೧೪ ಸಾವಿರದ ೭೦೦ ಹೆಕ್ಟೇರ್ ಪ್ರದೇಶದಲ್ಲಿ ಬೆಲೆ ಹಾನಿಯಾಗಿದೆ ಎಂದು ವರದಿಯಾಗಿದೆ. ಅಸ್ಸಾಂನಲ್ಲಿ ಭಾರೀ ಮಳೆ ಹಾಗೂ ಅರುಣಾಚಲ ಪ್ರದೇಶದ ಸುಬನ್ಸಿರಿ ಅಣೆಕಟ್ಟೆನಿಂದ ಹೆಚ್ಚುವರಿ ನೀರನ್ನು ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಪ್ರವಾಹ ಪರಿಸ್ಥಿತಿ ಗಂಭೀರವಾಗಿದೆ. ದಿಬ್ರುಗಢ ಜಿಲ್ಲೆಯಲ್ಲಿ ಪ್ರವಾಹ ಪೀಡಿತ ಹಟಿಯಾಲಿಚಾರ್‌ನಲ್ಲಿ ಸಿಲುಕಿದ್ದ ೧೩ ಮೀನುಗಾರರನ್ನು ಇಂದು ವಾಯುಪಡೆ ವಿಮಾನದ ಮೂಲಕ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತಿರಸಲಾಯಿತು. ಅಸ್ಸಾಂ ಮುಖ್ಯಮಂತ್ರಿ ಹಿಮಂತಾ ಬಿಸ್ವಾ ಶರ್ಮಾ, ಇಂದು ಮಧ್ಯಾಹ್ನ ಗೋಲಾಘಾಟ್ ಜಿಲ್ಲೆಗೆ ಭೇಟಿ ನೀಡಿ, ಪ್ರವಾಹ ಪರಿಸ್ಥಿತಿಯನ್ನು ಅವಲೋಕಿಸಿದರು. ಇದೇ ವೇಳೆ ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ತಾತ್ಕಾಲಿಕ ಪರ್ಯಾಯ ಶಿಬಿರಗಳನ್ನು ತೆರೆಯಲಾಗಿದೆ. ರಕ್ಷಣೆಗಾಗಿ ಹಾಗೂ ಪರ್ಯಾಯ ಕಾರ್ಯಾಚರಣೆಗಾಗಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆಯ ತಂಡಗಳನ್ನು ನಿಯೋಜಿಸಲಾಗಿದೆ. ಮತ್ತೊಂದೆಡೆ, ಅರುಣಾಚಲ ಪ್ರದೇಶದಲ್ಲಿ ಧಾರಾಕಾರ ಮಳೆಯಿಂದಾಗಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಕೆಲವೆಡೆ ಭೂಕುಸಿತ ಉಂಟಾಗಿದೆ. ಇದರಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಭಾರೀ ಮಳೆ ಹಿನ್ನೆಲೆಯಲ್ಲಿ ಇಟಾನಗರ ಮತ್ತು ಪಪುಂ ಪಾರೆ ಜಿಲ್ಲೆಗಳಲ್ಲಿ ಮುಂದಿನ ಐದು ದಿನಗಳ ಕಾಲ ಜಿಲ್ಲಾಡಳಿತ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಿದೆ.

<><*<><>*><>

ಮುಂಬೈ ಷೇರು ಮಾರುಕಟ್ಟೆಯಲ್ಲಿಂದೆ ಷೇರು ಸಂವೇದಿ ಸೂಚ್ಯಂಕ-ಸೆನ್ಸೆಕ್ಸ್, ೩೫ ಅಂಕಗಳು ಇಳಿಕೆ ಕಂಡಿದ್ದು, ದಿನದ ಅಂತ್ಯಕ್ಕೆ ೭೯ ಸಾವಿರದ ೪೪೧ ಅಂಕಗಳು ದಾಖಲಾಗಿದೆ. ಇದೇ ವೇಳ ರಾಷ್ಟ್ರೀಯ ಸಂವೇದಿ ಸೂಚ್ಯಂಕ-ನಿಫ್ಟಿ, ೧೮ ಅಂಕಗಳು ಇಳಿಕೆಯಾಗಿದ್ದು, ದಿನದ ಅಂತ್ಯಕ್ಕೆ ೨೪ ಸಾವಿರದ ೧೨೪ ಅಂಕಗಳು ದಾಖಲಾಗಿದೆ. ಅಮೆರಿಕನ್ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ೮೩ ರೂಪಾಯಿ ೫೧ ಪೈಸೆಯಷ್ಟಾಗಿದೆ.

<><*<><>*><>

ಯುರೋ ಕಪ್ ೨೦೨೪ ಫುಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಪೋರ್ಚುಗಲ್, ಫ್ರಾನ್ಸ್ ಮತ್ತು ಸ್ಪೇನ್ ತಂಡಗಳು ಕ್ವಾರ್ಟರ್ ಫೈನಲ್ ಪ್ರವೇಶಿಸಿವೆ. ಕಳೆದ ರಾತ್ರಿ ಜ¡ನಿಯ ಫ್ರಾಂಕ್‌ಫರ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ಪೋರ್ಚುಗಲ್ ತಂಡ ಸ್ಲೋವೇನಿಯಾವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ೩-೦ ಗೋಲುಗಳ ಅಂತರದಲ್ಲಿ ಸೋಲಿಸಿತು. ನಾಯಕ ಕ್ರಿಸ್ಟಿಯಾನೊ ರೊನಾಲ್ಡೊ, ಬ್ರುನೊ

ಫರ್ನಾಂಡಿಸ್ ಹಾಗೂ ಬರ್ನಾರ್ಡೊ ಸಿಲ್ವಾ ಪೆನಾಲ್ಟಿ ಗೋಲಗಳನ್ನು ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ಮತ್ತೊಂದು ಫ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಫ್ರಾನ್ಸ್ ತಂಡ ಬಿಲ್ಜಿಯಂ ವಿರುದ್ಧ ಜಯ ಸಾಧಿಸಿದೆ. ೮೫ನೇ ನಿಮಿಷದಲ್ಲಿ ಜನಾ ವೆರ್ಟೋಂಗ್‌ಹೆನ್ ಅವರು ಸಿಡಿಸಿದ ಗೋಲಿನಿಂದಾಗಿ ಫ್ರಾನ್ಸ್ ತಂಡವನ್ನು ಮುಂದಿನ ಹಂತ ತಲುಪಿತು. ಇನ್ನೊಂದು ಪಂದ್ಯದಲ್ಲಿ ಸ್ಪೇನ್ ತಂಡ ೪-೧ ಗೋಲುಗಳಿಂದ ಜಾರ್ಜಿಯ ತಂಡವನ್ನು ಮಣಿಸಿ ಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದೆ. ಇಂದು ರೊಮೆನಿಯಾ ಮತ್ತು ನೆದರ್‌ಲ್ಯಾಂಡ್ಸ್ ನಡುವೆ ಪಂದ್ಯ ನಡೆಯಲಿದ್ದು, ಭಾರತೀಯ ಕಾಲಮಾನ ರಾತ್ರಿ ೯.೩೦ ಕ್ಕೆ ಪಂದ್ಯ ಆರಂಭವಾಗಲಿದೆ.

<><*<><>*><>

ಜಾರ್ಡನ್‌ನ ಅಮ್ಮಾನ್‌ನಲ್ಲಿ ನಡೆದ ೨೩ ವಯೋಮಿತಿಯ ಏಷ್ಯನ್ ಕುಸ್ತಿ ಚಾಂಪಿಯನ್ ಶಿಪ್ ೨೦೨೪ ರಲ್ಲಿ ಭಾರತದ ಯುವ ಕುಸ್ತಿಪಟುಗಳು ೪ ಚಿನ್ನ, ೨ ಬೆಳ್ಳಿ ಹಾಗೂ ೨ ಕಂಚಿನೊಂದಿಗೆ ಒಟ್ಟು ೮ ಪದಕಗಳನ್ನು ಜಯಿಸಿ ಅತ್ಯುತ್ತಮ ಪ್ರದರ್ಶನ ನೀಡಿದರು. ೭೦ ಕೆಜಿ ವಿಭಾಗದಲ್ಲಿ ಅಭಿಮನ್ಯು, ೯೦ ಕೆಜಿ ವಿಭಾಗದಲ್ಲಿ ಜಾಂಟಿ ಕುಮಾರ್, ೯೭ ಕೆಜಿ ವಿಭಾಗದಲ್ಲಿ ಸಾಹಿಲ್ ಜಗ್ಲಾನ್ ಹಾಗೂ ೧೨೫ ಕೆಜಿ ವಿಭಾಗದಲ್ಲಿ ಅನಿರುದ್ಧ ಕುಮಾರ್ ಸ್ವರ್ಣ ಪದಕ ಗಳಿಸಿದ್ದಾರೆ. ೬೫ ಕೆಜಿ ವಿಭಾಗದಲ್ಲಿ ರೋಹಿತ್ ಹಾಗೂ ೭೪ ಕೆಜಿ ವಿಭಾಗದಲ್ಲಿ ಜೈದೀಪ್ ಸ್ವರ್ಣ ಪದಕ ಜಯಿಸಿದರೆ, ೫೭ ಕೆಜಿ ವಿಭಾಗದಲ್ಲಿ ಶುಭಮ್ ಹಾಗೂ ೭೯ ಕೆಜಿ ವಿಭಾಗದಲ್ಲಿ ಅಮಿತ್ ಕಂಚು ಪದಕ ತಮ್ಮದಾಗಿಸಿಕೊಂಡಿದ್ದಾರೆ. ಈ ಪ್ರತಿಷ್ಠಿತ ಪಂದ್ಯಾವಳಿಯಲ್ಲಿ ಭಾರತ ತಂಡ ನೀಡಿದ ಸರ್ವಕಾಲಿಕ ಅತ್ಯುತ್ತಮ ಪ್ರದರ್ಶನ ಇದಾಗಿದ್ದು, ಭಾರತದ ನಂತರ ಕಜಾಕಿಸ್ಥಾನ್ ೨ನೇ ಸ್ಥಾನ ಹಾಗೂ ಕಿರ್ಗಿಸ್ಥಾನ್ ೩ನೇ ಸ್ಥಾನ ಪಡೆದುಕೊಂಡವು.

<><*<><>*><>

ಭಾರತ-ಥಾಯ್ಲೆಂಡ್ ಜಂಟಿ ಮಿಲಿಟರಿ ಸಮರಾಭ್ಯಾಸ - ಮೈತ್ರಿಯ ೧೩ನೇ ಅವೃತ್ತಿಯಲ್ಲಿ ಪಾಲ್ಗೊಳ್ಳಲು ಭಾರತೀಯ ಸೇನೆ ತುಕಡಿ ನಿನ್ನೆ ಥಾಯ್ಲೆಂಡ್‌ಗೆ ತೆರಳಿದೆ. ಈ ಸಮರಾಭ್ಯಾಸ ಇದೇ ೧೫ರ ವರೆಗೆ ನಡೆಯಲಿದೆ. ೭೬ ಸಿಬ್ಬಂದಿಯನ್ನು ಒಳಗೊಂಡಿರುವ ಭಾರತೀಯ ಸೇನಾ ತುಕಡಿಯನ್ನು ಮುಖ್ಯವಾಗಿ ಲಡಾಖ್ ಸ್ಕೌಟ್ಸ್ ಬೆಟಾಲಿಯನ್ ಮತ್ತು ಇತರ ಶಸ್ತ್ರಾಸ್ತ್ರ ಮತ್ತು ಸೇವೆಗಳ ಸಿಬ್ಬಂದಿ ಪ್ರತಿನಿಧಿಸುತ್ತಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ರಾಯಲ್ ಥೈಲ್ಯಾಂಡ್ ಸೈನ್ಯದ ತುಕಡಿಯು ಮುಖ್ಯವಾಗಿ ೧ ನೇ ಬೆಟಾಲಿಯನ್, ೪ ವಿಭಾಗದ ೧೪ ಪದಾತಿ ದಳದ ೭೬ ಸಿಬ್ಬಂದಿಯನ್ನು ಒಳಗೊಂಡಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>